

ತ್ರಿಶೂರಿನ ಮನ್ನುತ್ತಿಯ ಕೇಕೃವಿಯ ಕೇಂದ್ರದಲ್ಲಿ ಲಕ್ಷಕ್ಕೂ ಹೆಚ್ಚು ಕಸಿ ಗಿಡ ಉತ್ಪಾದನೆ

ಇದ್ದಾರೆ, ಚಿಕ್ಕಪುಟ್ಟ ವಾಣಿಜ್ಯ ಬೆಳೆಗಾರರೂ ಇದ್ದಾರೆ. ಇವರಲ್ಲಿ ಹೆಚ್ಚಿನವರೂ ಸಾವಯವದ ಒಲವುಳ್ಳವರು. ಈಗ ಸಿಗುತ್ತಿರುವ ವಿಷಾಂಶಯುಕ್ತ ಟೊಮೆಟೊಕ್ಕೆ ಬದಲು ತಾವೇ ಬೆಳೆದ ಆರೋಗ್ಯಕರ ಬೆಳೆಯನ್ನು ಸವಿಯುವ ಬಯಕೆಯೂ ಇವರ ಆಸಕ್ತಿಗೆ ಇನ್ನೊಂದು ಕಾರಣ. ಇಂತಹ ಸಮಾನಾಸಕ್ತರು 'ಕರಾವಳಿ ಟೊಮೆಟೊ ಖುಷಿ' ಎಂಬ ವಾಟ್ಸ್ಆ್ಯಪ್ ಗುಂಪು ರಚಿಸಿ ಇಲ್ಲಿನ ಬಾಡುರೋಗ ಸಮಸ್ಯೆ ಪರಿಹರಿಸುವ ಮಾರ್ಗಗಳ ಬಗ್ಗೆ ಪ್ರಯತ್ನ ನಡೆಸುತ್ತಿದ್ದಾರೆ. ವಿಶ್ವವಿದ್ಯಾಲಯಗಳ ಬಾಡುರೋಗ ನಿರೋಧಕ ಟೊಮೆಟೊ ತಳಿಗಳಿದ್ದರೂ ಅವೂ ಇಲ್ಲಿ ಪೂರ್ತಿ ಯಶಸ್ವಿ ಅಲ್ಲ. ಹೀಗಾಗಿ ಇವರೆಲ್ಲರ ಗಮನ ಈಗ ಟೊಮೆಟೊ ಕಸಿ ಗಿಡ ಕಡೆಯೇ ಇದೆ.

ತರಕಾರಿ ಕೃಷಿಯ ಮಾತು ಬಂದಾಗ ಎಲ್ಲರ ಮೊದಲ ಕೊರಗೇ ಇಲ್ಲಿ ಟೊಮೆಟೊ ಬೆಳೆಸಲು ಆಗುತ್ತಿಲ್ಲ ಎನ್ನುವುದು. ಇದಕ್ಕೆ ಸರಿಯಾದ ಪರಿಹಾರ ಇದೆ ಎಂಬ ಮಾಹಿತಿ ಎಲ್ಲರಲ್ಲೂ ಇಲ್ಲ. ವಾಣಿಜ್ಯ ಕೃಷಿ ಮಾಡುವ ಕೆಲವು ಸಾವಯವ ಕೃಷಿಕರು ಕಸಿ ಟೊಮೆಟೊ ಗಿಡದ ಬಗ್ಗೆ ತಿಳಿದಿದ್ದು ತಮಗದು ಬೇಕೆಂದು ಆಗಾಗ ಕೇಳುತ್ತಿರುತ್ತಾರೆ. ಇದೇ ಉಮೇದು ಹವ್ಯಾಸಿ ಬೆಳೆಗಾರರಲ್ಲೂ ಇದೆ ಎನ್ನುತ್ತಾರೆ 'ಕರಾವಳಿ ಟೊಮೆಟೊ ಖುಷಿ' ವಾಟ್ಸಪ್ ಗುಂಪಿನ ಅಡ್ಮಿನ್, ಮಂಗಳೂರಿನ ಸಾವಯವ ಕೃಷಿಕ ಪ್ರದೀಪ್ ಸೂರಿ.

ಜಿಲ್ಲೆಯ ಸಾವಯವ ಕೃಷಿಕರು ಪ್ರತಿ ಭಾನುವಾರ ಪೂರ್ವಾಹ್ನ ಮಂಗಳೂರಿನಲ್ಲಿ ಸಾವಯವ ಸಂತೆ ನಡೆಸುತ್ತಿದ್ದಾರೆ. ಇಲ್ಲಿನ ತರಕಾರಿಗಳ ಬೆಲೆಯನ್ನು ಕೃಷಿಕ ಪ್ರತಿನಿಧಿಗಳೇ ನಿರ್ಧರಿಸಿ ಹಿಂದಿನ ದಿನ ವಾಟ್ಸಪ್ ಮೂಲಕ ಪ್ರಕಟಿಸುತ್ತಾರೆ. ಈ ವ್ಯವಸ್ಥೆ ಸಾವಯವ ತರಕಾರಿ ಬೆಳೆಸುವವರಿಗೆ ಒಂದು ಹೊಸ ಹುಮ್ಮಸ್ಸು ಕೊಟ್ಟಿದೆ.

## ಬೇರೆ ರೋಗಗಳಿಗೂ ಪರಿಹಾರ

ಕಸಿ ಟೊಮೆಟೊ ಗಿಡ ಜಾಸ್ತಿ ಮಳೆಯ ಮಲೆನಾಡಿಗೆ ಮಾತ್ರ ಅವಶ್ಯಕ ಅಂತೇನಲ್ಲ, ಕಡಿಮೆ ಮಳೆಯ ಕೋಲಾರದಂತಹ ಜಿಲ್ಲೆಯಲ್ಲೂ ಟೊಮೆಟೊಗೆ ಜಂತುಹುಳ (ನೆಮಟೋಡ್) ಸಮಸ್ಯೆ ಇದೆ. ಅದಕ್ಕೂ ಇದು ಪರಿಹಾರ ಆಗಬಲ್ಲುದು. ಫ್ಯುಸೇರಿಯಂ ಎಂಬ ಶಿಲೀಂಧ್ರದಿಂದ ಬರುವ ಬಾಡುರೋಗವನ್ನೂ ಕಸಿ ಗಿಡ ದೂರ ಇಡಬಲ್ಲುದು. ಈ ರಂಗದಲ್ಲಿ ಕೇರಳದಲ್ಲಾದಷ್ಟು ಪ್ರಗತಿ, ಅಧ್ಯಯನ ಕರ್ನಾಟಕದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಆಗಿಲ್ಲ ಎನ್ನುತ್ತಾರೆ ಮೈಸೂರು ತೋಟಗಾರಿಕಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಬಿ.ಎಸ್. ಹರೀಶ್.

'ಟೊಮೆಟೊ ಗಿಡಕ್ಕೆ ಆಯಾಯಾ ಪ್ರದೇಶದಲ್ಲಿ ಹೆಚ್ಚು ಸೂಕ್ತ ಅಡಿ ಗಿಡ ಯವುದು ಎನ್ನುವುದನ್ನು ಕಂಡುಕೊಳ್ಳಬೇಕಿದೆ. ಬಾಡು ರೋಗ, ಜಂತುಹುಳ ರೋಗಗಳಲ್ಲದೆ ಹೆಚ್ಚಿನ ಇಳುವರಿ ಮತ್ತು ಗುಣಮಟ್ಟದ ಬೆಳೆ ಪಡೆಯಲೂ ಕಸಿ ಗಿಡಗಳನ್ನು ಬಳಸಿಕೊಳ್ಳಲು ಸಾಧ್ಯ' ಎನ್ನುವುದು ಶಿರಸಿ ತೋಟಗಾರಿಕಾ ಕಾಲೇಜಿನ ತರಕಾರಿ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಶಿವಾನಂದ ಹೊಂಗಲ್ ಅವರ ಅಭಿಪ್ರಾಯ. ಇವರು ಟೊಮೆಟೊ ಗಿಡಕ್ಕೆ ಅತ್ಯುತ್ತಮ ಅಡಿ ಗಿಡ ಕಂಡುಹಿಡಿಯುವ ಅಧ್ಯಯನವನ್ನು ತನ್ನ ಎಂ.ಎಸ್ಸಿ. ವಿದ್ಯಾರ್ಥಿ ಒಬ್ಬರಿಗೆ ವಹಿಸಿದ್ದಾರೆ.



ಕೆ. ಮಣಿಕಂಠನ್

ದ.ಕ. ಜಿಲ್ಲೆಯ ಹಲವು ಸಾವಯವ ಉತ್ಸಾಹಿಗಳು ಟೊಮೆಟೊ ಕಸಿ ಗಿಡ ಉತ್ಪಾದನೆಯಲ್ಲಿ ತರಬೇತಿ ಪಡೆಯಲು ತುದಿಗಾಲಿನಲ್ಲಿ ನಿಂತಿದ್ದಾರೆ. ಮಂಗಳೂರಿನ ನಗರ ಕೃಷಿಕರಾದ ಭಾಗ್ಯಲಕ್ಷ್ಮಿ ಭಿಡೆ, ತರಕಾರಿ ಕೃಷಿಯಲ್ಲಿ ಸ್ವಯಂಪೂರ್ಣತೆಗಾಗಿ ಶ್ರಮಿಸುತ್ತಿರುವ ಅಡ್ಯನಡ್ಕ ವಾರಣಾಶಿ ಫಾರ್ಮ್ಸಿನ ಡಾ. ಅಶ್ವಿನಿ ಕೃಷ್ಣಮೂರ್ತಿ – ಈ ಪೈಕಿ ಮುಂಚೂಣಿಯಲ್ಲಿರುವ ಇಬ್ಬರು.

'ಬೇಡಿಕೆ ಇದ್ದರೆ, ಕಾಸರಗೋಡು ಕೆವೀಕೆಯಲ್ಲಿ ಟೊಮೆಟೊ ಕಸಿ ಗಿಡ ಉತ್ಪಾದನೆಯ ಬಗ್ಗೆ ತರಬೇತಿ ಕೊಡಲು ತಾವು ಸಿದ್ಧ' ಎನ್ನುತ್ತಿದ್ದಾರೆ ಕಾಸರಗೋಡು ಕೆವೀಕೆಯ ಮುಖ್ಯಸ್ಥರು. ಇದಕ್ಕೆ ಎರಡು ದಿನ ಸಾಕಂತೆ. ಹಾಗೆಯೇ ಮುಂಗಡ ಆದೇಶದ ಮೇರೆಗೆ, ಟೊಮೆಟೊ, ಬದನೆ ಇತ್ಯಾದಿಗಳ ಕಸಿ ಗಿಡ ತಯಾರಿಸಿ ಕೊಡಲೂ ಇವರು ಸಿದ್ಧ. ಕಸಿ ಗಿಡಗಳ ಬೆಲೆ ಈಗ ನಿಶ್ಚಯವಾಗಿಲ್ಲ. ಆದರೆ ಅದು ಹಗುರವಾಗಿಯೇ ಇರುತ್ತದೆ.

## 'ಈ ಟೊಮೆಟೊ- ಇತರ ಕಸಿ ಗಿಡಗಳು

ನಮ್ಮೂರಲ್ಲಿ ಯಶಸ್ವಿಯಾದಾವೇ?' ಎಂಬ ಸಂಶಯ ಹಲವು ಮಲೆನಾಡಿಗರಲ್ಲಿ ಇರಲು ಸಾಧ್ಯ. ಈ ಬಗ್ಗೆ ಏನೇನೂ ಸಂದೇಹವೇ ಬೇಡ. ಸೂಕ್ತ ಸೀಸನಿನಲ್ಲಿ ನೆಟ್ಟು, ಸರಿಯಾದ ನಿರ್ವಹಣೆ ಮಾಡಿದರೆ ಅತ್ಯುತ್ತಮ ಬೆಳೆ ತೆಗೆಯಲೂ ಸಾಧ್ಯವಿದೆ ಎನ್ನುತ್ತಾರೆ ಕೆ. ಮಣಿಕಂಠನ್.

ನೀಲೇಶ್ವರದಲ್ಲಿ ಕಳೆದ ವರ್ಷ ಜಿಲ್ಲೆಯಲ್ಲೇ ಮೊದಲ ಬಾರಿ ಟೊಮೆಟೊ ಕಸಿ ಗಿಡ ಬಳಸಿ ಕೃಷಿ ಮಾಡಿದ್ದಾರೆ. ಅಲ್ಲಿನ ಕೃಷಿ ಇಲಾಖೆಯ ಉಪನಿರ್ದೇಶಕಿ ವೀಣಾರಾಣಿಯವರ ಉತ್ಸಾಹ ಇದಕ್ಕೆ ಕಾರಣ. 'ಐವತ್ತು ಸಾವಿರ ರೂಪಾಯಿ ವೆಚ್ಚ ಮಾಡಿ ದೂರದ ತ್ರಿಶೂರಿನ ಕೇರಳ ಕೃಷಿ ವಿಶ್ವವಿದ್ಯಾಲಯದಿಂದ ಹತ್ತುಸಾವಿರಕ್ಕೂ ಹೆಚ್ಚು ಗಿಡ ತರಿಸಿದ್ದೆವು. ಒಬ್ಬೊಬ್ಬರಿಗೆ 500 ಗಿಡದಂತೆ ಕೊಟ್ಟಿದ್ದೆವು. ಕಸಿ ಗಿಡದಲ್ಲಿ ಸಾಮಾನ್ಯ ಟೊಮೆಟೊ ಗಿಡದ ಒಂದೂವರೆ ಪಾಲು ಬೆಳೆ ಬಂದಿದೆ ಎಂದು ಹಲವು ರೈತರು ಹೇಳುತ್ತಿದ್ದಾರೆ' ಎಂದು ನೆನೆಯುತ್ತಾರೆ ವೀಣಾ ರಾಣಿ.

ಕಾಸರಗೋಡು – ದಕ್ಷಿಣ ಕನ್ನಡ ಜಿಲ್ಲೆಗಳು ಇದೇ ಋತುವಿನಲ್ಲಿ ಹೊಸ ಉತ್ಸಾಹದಿಂದ ಟೊಮೆಟೊ ಬೆಳೆಸಲು ಕಾಯುತ್ತಿವೆ. ಇಲ್ಲಿನ ಕೆಲವರು ಪ್ರಾಯೋಗಿಕ ಕೃಷಿಗಾಗಿ ಕಸಿ ಟೊಮೆಟೊ ಗಿಡ ಮಾಡಿಕೊಡಲು ಕಾಸರಗೋಡು ಕೆವೀಕೆಯೊಡನೆ ವಿನಂತಿಸಿದ್ದಾರೆ.

ಕೇಕೃವಿಯ ಉತ್ಸಾಹದಿಂದ ಕಸಿ ಟೊಮೆಟೊ ಕೇರಳದ ಕೆಲವೊಂದು ಭಾಗಗಳಲ್ಲಿ ಸಂಚಲನ ಸೃಷ್ಟಿಸಿದೆ. ಎಲ್ಲವೂ ಸರಿಯಾದರೆ, ಮುಂದಿನ ಬೇಸಿಗೆಯಲ್ಲಿ ಅದು ಈ ಗಡಿಪ್ರದೇಶವನ್ನೂ ಗೆಲ್ಲಬಹುದು – ಕರ್ನಾಟಕದ ಕಡಿಮೆ ಮಳೆಯ ಪ್ರದೇಶಗಳಲ್ಲೂ ತನ್ನ ಕಮಾಲ್ ತೋರಿಸಲೂಬಹುದು.

**ಕೆ. ಮಣಿಕಂಠನ್ ಸಂಪರ್ಕ: 94962 96986. ಕಾಸರಗೋಡು ಕೆವೀಕೆ ಮಿಂಚಂಚೆ: cpcrikvk1@yahoo.com**